**ಇಂದು ದಿ:05-09-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಡಿಕ್ರಿದಾರರ ಪರ ಶ್ರೀ ಬಿ.ಎಚ್ ವಕೀಲರಿಂದ:**

ನಾನು ಹರಿಹರದಲ್ಲಿ ತಾಲೂಕು ಸರ್ವೆಯರ್ ಆಗಿ 2006 ರಿಂದ 2021 ರವರೆಗೆ ಕೆಲಸ ಮಾಡಿದ್ದೇನೆ. ನಾನು ನ್ಯಾಯಾಲಯದ ಬೇಲಿಪರ ಜೊತೆಗೆ ದಾವಾ ಐಟಂ ನಂಬರ್-4 ಆಸ್ತಿ ನಂಬರ್-822 ರ ಸ್ವಾಧೀನಕೊಡಿಸಲು ಹೋಗಿದ್ದೆನು. ನಾನು ಡಿಕ್ರಿದಾರರಾದ ಹಾಲಮ್ಮ ಎನ್ನುವವರಿಗೆ ಸ್ವಾಧೀನಕೊಡಿಸಲು ನಾನು ಸಹಾಯ ಮಾಡಿದ್ದೇನೆ. ನಾನು ಬೇಲಿಪರ ಜೊತೆಗೆ ಹೋಗಿ ಅಳತೆ ಮಾಡಿ, ಸ್ವಾಧೀನಕೊಡಿಸಲು ಸಹಾಯ ಮಾಡಿದ್ದೇನೆ. ಸಾಕ್ಷಿಯು ನಿ.ಪಿ-42(ಸಿ) ತಮ್ಮ ಸಹಿ ಎಂದು ನೋಡಿ ಗುರುತಿಸಿದ್ದಾರೆ. ಡಿಕ್ರಿದಾರರಾದ ಹಾಲಮ್ಮ ಎನ್ನುವವರು ಹಾಜರಿದ್ದು, ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-42(ಹೆಚ್) ಎಂದು ಈಗಾಗಲೇ ಗುರುತಿಸಲಾಗಿದೆ. ಪೋಲೀಸ್ ಸಿಬ್ಬಂದಿಯಾದ ಲೋಹಿತ್ ಎನ್ನುವವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-42(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರ್ ನ್ನು ತೋರಿಸಲಾಗಿ, ಅದರ ಮೇಲೀರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದಾರೆ ಅದನ್ನು ನಿ.ಪಿ-45 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-45(ಎ) ಎಂದು ಗುರುತಿಸಲಾಯಿತು. ಡಿಕ್ರಿದಾರರಾದ ಹಾಲಮ್ಮ ಎನ್ನುವವರು ಸಹ ಸಹಿ ಮಾಡಿದ್ದು, ಅದನ್ನು ನಿ.ಪಿ-45(ಬಿ) ಎಂದು ಗುರುತಿಸಲಾಯಿತು. ಓಂಕಾರಪ್ಪ ಎನ್ನುವ ನ್ಯಾಯಾಲಯದ ಅಮೀನರು ಸಹಿ ಮಾಡಿದ್ದು, ಅದನ್ನು ನಿ.ಪಿ-45(ಸಿ) ಎಂದು ಗುರುತಿಸಲಾಯಿತು. ನಾನು ಸಹಿ ಮಾಡಿದಾಗ ಪೋಲೀಸರು ಸಹಿ ಮಾಡಿದ್ದಾರೆ, ಆದರೆ ಅವರ ಹೆಸರು ನೆನಪಿರುವುದಿಲ್ಲ.

**ಪಾಟೀ ಸವಾಲು: ಆಕ್ಷೇಪದಾರರ ಪರ ಶ್ರೀ ಎಸ್.ಕೆ ವಕೀಲರಿಂದ:**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾವಾ ಐಟಂ ನಂಬರ್-4 ರ ಅತಳೆ ಕಾರ್ಯ ಮಾಡಿದ್ದೇವೆ. ನಾನು ಪಶ್ಚಿಮ ಕಡೆಯಿಂದ ಪೂರ್ವಕಡೆಗೆ ಅತಳೆ ಮಾಡಿದ್ದೇನೆ. ನ್ಯಾಯಾಲಯದ ಬೇಲಿಪರು ಎಫ್.ಡಿ.ಪಿ ಪ್ರಕರಣದ ಸ್ಕೆಚ್ ನ್ನು ಬೇಲೀಪರಿಂದ ಪಡೆದುಕೊಂಡಿದ್ದೇನೆ. ನಮ್ಮ ಇಲಾಖೆಯ ಸರ್ವೆಯರ್ ರವರೇ ಎಫ್.ಡಿ.ಪಿ ಸ್ಕೆಚ್ ನ್ನು ತಯಾರಿಸಿದ್ದರು. ಐಟಂ ನಂಬರ್-4 ರ ಅಳತೆಯನ್ನು ಯಾವ ಕಡೆಯಿಂದ ಯಾವ ಕಡೆಗೆ ಮಾಡಿದ್ದೇವೆಂದು ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ಐಟಂ ನಂಬರ್-4 ರ ಅಳತೆ ಕ್ಷೇತ್ರ 12.20X18.23 ಅಡಿಗಳಲ್ಲಿ 40X60 ಅಡಿ ಇರಬಹುದು. ಐಟಂ ನಂಬರ್-4 ರಲ್ಲಿ ಸುತ್ತಲೂ 1 ವರೆ ಅಡಿ ಬಿಟ್ಟು, ಪೌಂಡೇಷನ್ ಹಾಕಿದೆ ಎಂದರೆ ಸರಿ. ಸದರಿ

ಜಾಗದಲ್ಲಿ 19X30 ಅಡಿ ಮನೆಕಟ್ಟಿಕೊಂಡಿದ್ದಾರೆಂದರೆ ಸರಿ. ಉಳಿದ ಜಾಗ ತಕರಾರು ದಾರರ ಸ್ವಾಧೀನದಲ್ಲಿದೆ ಎನ್ನುವುದು ನನಗೆ ಗೊತ್ತಾಗುವುದಿಲ್ಲ. ಐಟಂ ನಂಬರ್-4 ರ ಪೂರ್ವಕ್ಕೆ ಭಾಷ ಸಾಬ್ ಎನ್ನುವವರ ಮನೆ ಬರುತ್ತದೆ ಎನ್ನುವುದು ಸರಿಯಲ್ಲ, ಕನ್ಸರವೆನ್ಸಿ ಬರುತ್ತದೆ. ಕನ್ಸರವೆನ್ಸಿ ಎಷ್ಟು ಅಡಿ ಇದೆ ಎನ್ನುವುದು ನನಗೆ ನೆನಪಿಲ್ಲ. ಕನ್ಸರವೆನ್ಸಿ ಗೆ ಲಗತ್ತಾಗಿ ಭಾಷ ಸಾಬ್ ರ ಮನೆ ಬರುತ್ತದೆ ಎನ್ನುವುದು ಗೊತ್ತಿಲ್ಲ. ಪಶ್ಚಿಮಕ್ಕೆ ಪಯಾಜ್ ಅಹಮ್ಮದ್ ಮತ್ತು ಒಡೆಯಪ್ಪ ಎನ್ನುವವರ ಮನೆ ಬರುತ್ತದೆ ಎನ್ನುವುದು ಸರಿಯಲ್ಲ. ರಸ್ತೆ ಬರುತ್ತದೆ. ಉತ್ತರಕ್ಕೆ ಅನ್ವರ್ ಸಾಬ್ ಮತ್ತು ಮೈಲಪ್ಪ ಎನ್ನುವವರ ಮನೆ ಬರುತ್ತದೆ ಎನ್ನುವುದು ಸರಿಯಲ್ಲ. ದಕ್ಷಿಣಕ್ಕೆ ದೇವಸ್ಥಾನ ಬರುತ್ತದೆ ಎನ್ನುವುದು ಸರಿಯಲ್ಲ. ದಾವಾ ಐಟಂ ನಂಬರ್-4 ಕ್ಕೆ ನಾನು ಹೋಗಿರುವುದಿಲ್ಲ ಎನ್ನುವುದು ಸರಿಯಲ್ಲ. ದಾವಾ ಐಟಂ ನಂಬರ್-4 ಕ್ಕೆ ಹೋಗುವ ಕುರಿತು ತಕರಾರು ದಾರರಾದ ಜಾವೇದ್ ಎನ್ನುವವರಿಗೆ ನಾನು ನೋಟೀಸ್ ಕೊಟ್ಟಿರುವುದಿಲ್ಲ. ಮಹಜರ್ ನ್ನು ಕೋರ್ಟ್ ಅಮೀನರು ಮಾಡಿದ್ದಾರೆ. ಮಹಜರ್ ನ್ನು ಯಾರ ಸೂಚನೆಯ ಮೇರೆಗೆ ಅಮೀನರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್-4 ರ ಸುತ್ತ ಮುತ್ತಲಿರುವ ಆಸ್ತಿಗಳ ಮಾಲೀಕರಿಗೆ ನೋಟೀಸ್ ಕೊಟ್ಟು, ಸಾಕ್ಷಿ ಹೇಳಲು ಕೇಳಿರುವುದಿಲ್ಲ. ಸಾಕ್ಷಿದಾರರಾದ ಮಂಜುನಾಥ ಮತ್ತು ಚಂದ್ರು ಎನ್ನುವವರನ್ನು ಯಾರು ಕರೆಯಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್-4 ರ ಯಾವ ದಿಕ್ಕಿಗೆ ಡಿಕ್ರಿದಾರರ ಆಸ್ತಿ ಬರುತ್ತದೆಂದರೆ ಸಾಕ್ಷಿಯು ಅಂತಿಮ ಡಿಕ್ರಿಯ ಸ್ಕೆಚ್ ಪ್ರಕಾರ ಎಲ್ಲಿ ಬರುತ್ತದೆಯೋ ಅಲ್ಲಿಯೇ ಕೊಡಿಸಿರುತ್ತೇವೆ. ಅಮೀನರು ಮತ್ತು ಪೋಲೀಸರ ಜೊತೆಗೆ ಶಾಮೀಲಾಗಿ, ಸುಳ್ಳು ದಾಖಲೆ ಮಾಡಿರುತ್ತೇವೆ ಎನ್ನುವುದು ಸರಿಯಲ್ಲ. ಅಳತೆ ಕಲ್ಲುಗಳನ್ನು ಯಾರು ಹಾಕಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ದಾವಾ ಐಟಂ ನಂಬರ್-4 ರ ಸ್ವಾಧೀನವನ್ನು ತಪ್ಪಿಸಿ, ಯಾರಿಗೆ ಕೊಡಿಸಿದ್ದೇವೆಂದು ನನಗೆ ಹೇಳಲು ಬರುವುದಿಲ್ಲ. ದಾವಾ ಐಟಂ ನಂಬರ್-4 ಇಂದಿನವರೆಗೂ ತಕರಾರು ದಾರ ಜಾವೇದ್ ನ ಸ್ವಾಧೀನದಲ್ಲಿದೆ ಎನ್ನುವುದು ಸರಿಯಲ್ಲ. ನಿ.ಪಿ-42 ಮತ್ತು ನಿ.ಪಿ-45 ರ ವಿವರಗಳು ನನಗೆ ಗೊತ್ತಿರುವುದಿಲ್ಲ ಎನ್ನುವುದು ಸರಿಯಲ್ಲ. ದಾವಾ ಐಟಂ ನಂಬರ್-4 ನ್ನು ತಕರಾರು ದಾರ ಜಾವೇದ್ ಇಂದಿನವರೆಗೂ ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ ಎನ್ನುವುದು ಸರಿಯಲ್ಲ. ಉಳಿದ ಖಾಲಿ ಜಾಗವನ್ನು ಸಹ ತಕರಾರು ದಾರ ಜಾವೇದ್ ಅನುಭವಿಸುತ್ತಿದ್ದಾರೆ ಎನ್ನುವುದು ಸರಿಯಲ್ಲ. ಡಿಕ್ರಿದಾರರಾದ ಹಾಲಮ್ಮನಿಗೆ ದಾವಾ ಐಟಂ ನಂಬರ್-4 ನಿಮ್ಮ ಹಿಸ್ಸೆಗೆ ಬಂದಿದೆಂದು ನಾನು ಹೇಳಿರುವುದಿಲ್ಲ. ನಾನು ಅಮೀನರ ಸಹಾಯಕ್ಕೆ ಮಾತ್ರ ಹೋಗಿದ್ದೇನೆಂದರೆ ಸರಿ. ನಿ.ಪಿ-42 ಹಾಗೂ ನಿ.ಪಿ-45 ರಲ್ಲಿ ಬರೆದ ವಿಷಯ ಅಮೀನರು ಬರೆದಿದ್ದಾರೆ. ನಿ.ಪಿ-42 ಹಾಗೂ ನಿ.ಪಿ-45 ನ್ನು ಓದಿಕೊಂಡು ಸಹಿ ಮಾಡಿದ್ದೇನೆಂದು ಷರಾ ಬರೆದಿರುವುದಿಲ್ಲ ಎಂದರೆ ಸರಿ. ಅಮೀನರು ತಯಾರಿಸಿಕೊಂಡ ಬಂದ ನಿ.ಪಿ-42 ಹಾಗೂ ನಿ.ಪಿ-45 ಕ್ಕೆ, ನಾನು ಸಹಿ ಮಾಡಿದ್ದೇನೆ ಎನ್ನುವುದು

ಸರಿಯಲ್ಲ. ಅಮೀನರ ಜೊತೆಗೆ ಐಟಂ ನಂಬರ್-4 ರ ಆಸ್ತಿಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ-42 ಹಾಗೂ ನಿ.ಪಿ-45 ರ ವಿಷಯ ನನ್ನ ಖುದ್ದು ಗಮನಕ್ಕೆ ಇರುವುದಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.